# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

ಎಸ್‌ಸಿ. 264/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಅಭಿಮನ್ಯು | | <u>ಪ್ರಮಾಣ ಮಾಡಿಸಿದ ದಿನಾಂಕಃ</u> |
| **ತಂದೆ/ಗಂಡನ ಹೆಸರು** | ಃ ಶ್ರೀ ನಾಗಪ್ಪ | | **20.09.2024** |
| **ವಯಸ್ಸು** | ಃ 28 ವರ್ಷ | | |
| **ವೃತ್ತಿ** | ಃ ಕಾರ್ಪೆಂಟರ್ | | **ಪ್ರಾ.ಸಾ. ಃ 06** |
| **ವಾಸಸ್ಥಳ** | ಃ ಬನ್ನಂಗಾಡಿ | | **ಚಾ.ಸಾ. ಃ 07** |

**<u>ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ</u>**

. ಚಾ.ಸಾ–1 ಗೀತಾ ನನ್ನ ಸ್ನೇಹಿತನ ಅಕ್ಕನಿರುತ್ತಾರೆ ಮತ್ತು ನನ್ನ ಹೆಂಡತಿ ಕಡೆಯಿಂದ ಸಂಬಂಧಿಯಿರುತ್ತಾರೆ. ಮೃತ ಹರ್ಷಿತಾ ಗೀತಾ ಇವರ ಎರಡನೇ ಮಗಳಿರುತ್ತಾಳೆ. ಗೀತಾ ಇವರು ಡ್ರೆಸಿಂಗ್ ಟೇಬಲ್ ಮಾಡಿಕೊಡಲು ಹೇಳಿದ್ದರಿಂದ ಈಗ 1 ವರ್ಷ 2 ತಿಂಗಳ ಹಿಂದೆ ಒಂದು ದಿನ ಗೀತಾ ಇವರ ಕುಂಬಾರ ಕೊಪ್ಪಲಿನ ಮನೆಗೆ ಹೋಗಿದ್ದೆ. ಆ ದಿನ ಬೆಳಗ್ಗೆ 9 ರಿಂದ 9.30 ಗಂಟೆಗೆ ನಾನು ಅವರ ಮನೆಗೆ ಹೋಗಿದ್ದೆ. ಆ ಕಾಲಕ್ಕೆ ನಾನು, ಹರ್ಷಿತಾ, ಗೀತಾ, ರಶ್ಮಿ ಮತ್ತು ಸಂತೋಷ್ ಆ ಮನೆಯಲ್ಲಿದ್ದೆವು. ಆ ಕಾಲಕ್ಕೆ ಆರೋಪಿತ ಸಹ ಮನೆಯಲ್ಲಿದ್ದ. ಆರೋಪಿತ ನಾನು ಹೊಗುವ ಮೊದಲೇ ಆ ಮನೆಗೆ ಬಂದಿದ್ದ. ನಾನು ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ ಹರ್ಷಿತಾ ಮತ್ತು ಆರೋಪಿತ ಮನೆಯ ಹೊರಗಡೆ ಇದ್ದರು. ಗೀತಾ ಇವರು ಬಟ್ಟೆ ಒಣಗಿ ಹಾಕಲು ಹೊರಗೆ ಹೋದವರು ಪುನಃ ಒಳಗಡೆ ಬಂದಿದ್ದರು ಆ ಕಾಲಕ್ಕೆ ಮನೆಯ ಹೊರಗಡೆ ಕಿರುಚುವ ಶಬ್ದ

ಬಂದಿತ್ತು ಆಗ ನಾನು, ಗೀತಾ, ಸಂತೋಷ್, ರಶ್ಮಿ ಮನೆಯ ಹೊರಗಡೆ ಓಡಿ ಹೋಗಿ ನೋಡಿದಾಗ ಆರೋಪಿತ ಹರ್ಷಿತಾ ಇವರಿಗೆ ಚಾಕುವಿನಿಂದ ಚುಚ್ಚಿದ್ದ ಆಗ ನಾನು ಆರೋಪಿತನಿಗೆ ಎರಡು ಏಟು ಹೊಡೆದು ಬಿಡಿಸಿಕೊಂಡಿದ್ದೆ. ಆ ಕಾಲಕ್ಕೆ ಸಂತೋಷ್ ಮತ್ತು ಗೀತಾ ಸಹ ಬಿಡಿಸಿಕೊಳ್ಳಲು ಪ್ರಯತ್ನ ಮಾಡಿದಾಗ ಗೀತಾ ಇವರ ಕೈಗೆ ಗಾಯವಾಗಿತ್ತು. ಆ ಕಾಲಕ್ಕೆ ಹರ್ಷಿತಾ ಇವರ ಹೊಟ್ಟೆಯಲ್ಲಿ ಚಾಕು ಉಳಿದುಕೊಂಡಿತ್ತು ಹರ್ಷಿತಾಳೇ ಆ ಚಾಕುವನ್ನು ತೆಗೆದು ಬಿಸಾಡಿದ್ದರು. ನಂತರ ನಾನು, ಸಂತೋಷ, ಹರ್ಷಿತಾಳ ತಾಯಿ, ರಶ್ಮಿ ಸೇರಿ ಹರ್ಷಿತಾಳನ್ನು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದವು. ಆಗ ನಾನು ಮತ್ತು ಸಂತೋಷ್ ಹರ್ಷಿತಾಳನ್ನು ಒಂದು ಬೈಕ್ ನಲ್ಲಿ ಕರೆದುಕೊಂಡು ಹೋಗಿದ್ದವು. ಇನ್ನೊಂದು ಬೈಕ್ ನಲ್ಲಿ ಹರ್ಷಿತಾಳ ತಾಯಿ ಮತ್ತು ರಶ್ಮಿ ಬಂದಿದ್ದರು. ಆಗ ಜಿಲ್ಲಾ ಆಸ್ಪತ್ರೆಯಿಂದ ಕೆ.ಆರ್.ಆಸ್ಪತ್ರೆಗೆ ಕಳುಹಿಸಿದ್ದರು. ಆ ಕಾಲಕ್ಕೆ ನಾನು ಪೋಲೀಸ್ ಠಾಣೆಗೆ ಹೋಗಿ ಹೇಳಿಕೆ ಕೊಡುತ್ತಿದ್ದೆ. ನಂತರ ಕೆ.ಆರ್.ಆಸ್ಪತ್ರೆಗೆ ಹೊದಾಗ ಹರ್ಷಿತಾ ಮರಣಹೊಂದಿದ್ದಾಳೆ ಎಂದು ಪೋಲೀಸಿನವರು ಹೇಳಿದ್ದರು. ಆರೋಪಿತ ಹರ್ಷಿತಾಳನ್ನು ಕಳುಹಿಸಿಕೊಡುವಂತೆ *2-3* ಬಾರಿ ಕೇಳಿದ್ದ ಆ ಕಾರಣಕ್ಕೊ ಅಥವಾ ಬೇರೆ ಯಾವುದೋ ಕಾರಣಕ್ಕೊ ಹರ್ಷಿತಾಳಿಗೆ ಆರೋಪಿತ ಹಲ್ಲೆ ಮಾಡಿದ್ದ. ಪೋಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ. ಕೊಲೆಯಾಗಿದ್ದ ದಿನವೇ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಬೇರೆ ಯಾವತ್ತು ಕೊಟ್ಟಿಲ್ಲ. ಆ ಘಟನೆ ನಡೆದು *2-3* ತಿಂಗಳ ಬಳಿಕ ಕೋರ್ಟ್ ನಲ್ಲಿ ಸಹ ಹೇಳಿಕೆ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ಹೇಳಿಕೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಹೇಳಿಕೆಯನ್ನು ನಿ.ಪಿ-*15* ಮತ್ತು ಸಹಿಯನ್ನು ನಿ.ಪಿ-*15*(ಎ) ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಎಂ.ಒ-*1* ಆ ದಿನ ಆರೋಪಿತ ಹರ್ಷಿತಾಳಿಗೆ ಹಲ್ಲೆ ಮಾಡಲು

ಉಪಯೋಗಿಸಿದ್ದ ಚಾಕು ಇರುತ್ತದೆ. ಕೋರ್ಟ್ ಮುಂದೆ ಇರುವ ಆರೋಪಿತನೇ ಹರ್ಷಿತಾಳಿಗೆ ಹಲ್ಲೆ ಮಾಡಿದ್ದ ಹರ್ಷಿತಾಳ ಗಂಡ ಇರುತ್ತಾನೆ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

*2.* ಆ ದಿನ ನಾನು ಗೀತಾ ಇವರ ಮನೆಗೆ ಹೋದ ಬಳಿಕ ಸ್ವಲ್ಪ ಹೊತ್ತಿನ ನಂತರ ಆರೋಪಿತ ಅಲ್ಲಿಗೆ ಬಂದಿದ್ದ ಎಂದರೆ ನಿಜ. ಆ ಕಾಲಕ್ಕೆ ಆರೋಪಿತ ತನ್ನ ಅಳಿಯ ಎಂದು ಗೀತಾ ಹೇಳಿದ್ದರು ಎಂದರೆ ನಿಜ. ಸ್ವಲ್ಪ ಹೊತ್ತಿನ ನಂತರ ಚಾ.ಸಾ-*6* ಸಂತೋಷ್ ಸಹ ಬಟ್ಟೆ ಒಣಗಿ ಹಾಕಲು ಹಗ್ಗ ತೆಗೆದುಕೊಂಡು ಆ ಮನೆಗೆ ಬಂದಿದ್ದ ಎಂದರೆ ನಿಜ. ಆ ಕಾಲಕ್ಕೆ ಗೀತಾ ಬಟ್ಟೆ ಒಣಗಿ ಹಾಕಲು ಹೊರಗೆ ಹೋಗಿದ್ದರು ಆ ಕಾಲಕ್ಕೆ ರಶ್ಮಿ ಸಹ ಹೊರಗೆ ಹೋದರು ಎಂದರೆ ನಿಜ. ನಾನು ಮತ್ತು ಸಂತೋಷ್ ಗಲಾಟೆ ಶಬ್ದ ಕೇಳಿ ಹೊರಗೆ ಹೋದಾಗ ಆರೋಪಿ ಹರ್ಷಿತಾಳ ಹೊಟ್ಟೆಗೆ ಚುಚ್ಚುತ್ತಿದ್ದ ಎಂದರೆ ನಿಜ. ಆ ದಿನ ಹಲ್ಲೆ ಮಾಡಿದ ಬಳಿಕ ಹರ್ಷಿತಾಳನ್ನು ಗೀತಾ ರವರು ಒಂದು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಆರೋಪಿತ ರಸ್ತೆಯಲ್ಲೇ ಬಿದಿದ್ದ ಎಂದರೆ ನಿಜ. ನಂತರ ಪೋಲೀಸರು ಆರೋಪಿತನನ್ನು ಕರೆದುಕೊಂಡು ಹೋಗಿದ್ದರು ಎಂದರೆ ನಿಜ. ನಂತರ ಗೀತಾ ಪೋನ್ ಮಾಡಿ ಹರ್ಷಿತಾ ಮೃತ ಪಟ್ಟ ಬಗ್ಗೆ ತಿಳಿಸಿದ್ದರು ಎಂದರೆ ನಿಜ. ಹರ್ಷಿತಾಳನ್ನು ತನ್ನ ಮನೆಗೆ ವಾಪಸ್ಸು ಬರುವಂತೆ ಆರೋಪಿತ ಕರೆದಾಗ ಆಕೆ ನಿರಾಕರಿಸಿದ್ದರಿಂದ ಆರೋಪಿತ ಹರ್ಷಿತಾಳಿಗೆ ಚಾಕುವಿನಿಂದ ಚುಚ್ಚಿದ್ದ ಎಂದರೆ ನಿಜ. ಈ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ. ದಿಃ*14.08.2023* ರಂದು ಕೋರ್ಟ್ ನಲ್ಲಿ ಹೇಳಿಕೆ

ಕೊಟ್ಟಿದ್ದೆ ಎಂದರೆ ನಿಜ. ಈ ಕುರಿತು ಅಷ್ಟರಲ್ಲಿ ಅಲ್ಲಿಗೆ ----------- ತೆಗೆದುಕೊಂಡು ಹೋದರು ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಹೇಳಿಕೆಯ ಸದರಿ ಭಾಗವನ್ನು ನಿ.ಪಿ-*16* ಎಂದು ಗುರುತಿಸಿದೆ.

ಪಾಟೀ ಸವಾಲು : ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು